ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಕೊಡಗು, ಮಡಿಕೇರಿ

ಸಿ.ಸಿ. :23/2024

ಪಿ.ಡಬ್ಲ್ಯು: 1

ಸಿ.ಡಬ್ಲ್ಯು: 1

| | |
|---|---|
| ಸಾಕ್ಷಿದಾರರ ಹೆಸರು | ರೊಜೇಶ್ |
| ತಂದೆಯ ಹೆಸರು | ಗಣಪತಿ |
| ಪ್ರಾಯ | **36** ವರ್ಷ |
| ಉದ್ಯೋಗ | ಚಾಲಕ |
| ವಾಸಸ್ಥಳ | ಮೆಕೇರಿ |

**ದಿಃ27.10.2025ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಹಿಸಸಅಭಿಯೋಜಕರವರಿಂದಃ**

ಚಾಸಾ 2 ರಿಂದ 5 ಗೊತ್ತು.ಆರೋಪಿತರು ಗೊತ್ತು. ಆರೋಪಿತರು ಬಿ.ಎಸ್.ಸಿ ಸೊಲ್ಯೂಷನ್ ಎಂಬ ಹೆಸರಿನಲ್ಲಿ ಒಂದು ಸಂಸ್ಥೆಯನ್ನು ನಡೆಸುತ್ತಿದ್ದರು. ಸದರಿ ಸಂಸ್ಥೆ ಮುಂಖಾಂತರ ನಿರುದ್ಯೋಗಿ ವಿದ್ಯಾವಂತರಿಗೆ ಉದ್ಯೋಗ ಕೊಡಿಸುವ ಸೇವೆ ಮಾಡುತ್ತಿದ್ದೇವೆ ಎಂದು ಜಾಹಿರಾತು ಮಾಡಿದ್ದರು. ಸದರಿ ಸಂಸ್ಥೆಯ ಕಚೇರಿ ಮಂಗಳೂರಿನ ಕಂಕನಾಡಿಯ ಫಾದರ್ ಮುಲ್ಲಾಸ್ ಆಸ್ಪತ್ರೆಯ ಮುಂಭಾಗ ಮೋತಿ ಶಾಮ್ ಕಾಂಪ್ಲೆಕ್ಸ್ ಮೊದಲನೇ ಮಹಡಿಯಲ್ಲಿ ಇತ್ತು. ದಿಃ04.02.2019 ರಂದು 1ನೇ ಆರೋಪಿ ನನಗೆ ಫೋನ್ ಕರೆ ಮಾಡಿ ನನ್ನ ವಿದ್ಯಾರ್ಹತೆ ಮತ್ತು ಉದ್ಯೋಗದ ಬಗ್ಗೆ ವಿಚಾರಿಸಿದರು. ಆಗ ನಾನು ನನ್ನ ವಿದ್ಯಾರ್ಹತೆಯನ್ನು ಹೇಳಿಕೊಂಡು ನಿರುದ್ಯೋಗದಿಂದ ಮನೆಯಲ್ಲಿ ಇದ್ದೇನೆ ಎಂದು ತಿಳಿಸಿದೆ. ಆಗ 1ನೇ ಆರೋಪಿ ನನಗೆ ಕೆಲಸ ಕೊಡಿಸುವುದಾಗಿ ಬೆಂಗಳೂರಿನ ವಾಹನ

ಚಾಲನಾ ಕೆಲಸ ಕೊಡಿಸುವುದಾಗಿ ತಿಳಿಸಿದರು. 1ನೇ ಆರೋಪಿ 6 ತಿಂಗಳ ಕಾಲ ಗುತ್ತಿಗೆ ರೂಪದಲ್ಲಿ ಕೆಲಸ ಮಾಡಬೇಕು ಮತ್ತು ಆ ನಂತರ ಉದ್ಯೋಗವನ್ನು ಖಾಯಂ ಮಾಡುತ್ತಾರೆ ಎಂದು ಹೇಳಿದರು. ದಿಃ06.02.2019 ರಂದು ನನ್ನನ್ನು ಆರೋಪಿತರು ಬೆಂಗಳೂರಿನ ಗಾಂಧಿ ನಗರದಲ್ಲಿ ಇರುವ ಯು.ಟಿ.ಎಲಿಜೆನ್ಸ್ ಹೋಟೆಲ್ ಗೆ ಕರೆಸಿದರು. ನಾನು ಆ ಸಂದರ್ಭದಲ್ಲಿ ನನ್ನ ಆಧಾರ್ ಕಾರ್ಡ, ವಿದ್ಯಾರ್ಹತೆ ಬಗ್ಗೆ ಅಂಕಪಟ್ಟಿ ಮತ್ತು ಚಾಲನಾ ಪರವಾನಿಗೆ ಪತ್ರವನ್ನು ಕೊಟ್ಟೆ. 2ನೇ ಆರೋಪಿ ತನ್ನ ಹೆಸರನ್ನು ಜಾಕ್ಸನ್ ಎಂದು ಹೇಳಿದರು ಆದರೆ ಆತನ ನಿಜವಾದ ಹೆಸರು ಅನಿಸಿಲ್ ಜಕ್ರಿಯಾ ಆಗಿತ್ತು. ಅದೇ ದಿನ ಆರೋಪಿತರು ನನ್ನ ಹೆಸರನ್ನು ತಮ್ಮ ಸದಸ್ಯತ್ವದಲ್ಲಿ ನೋಂದಣಿ ಮಾಡಿಕೊಂಡು ಸಂದರ್ಶನಕ್ಕೆ ಒಳಪಡಿಸಿದರು. ಆರೋಪಿತರು ದಿಃ26.02.2019 ರಂದು ಮಂಗಳೂರಿನಲ್ಲಿ ಇರುವ ತಮ್ಮ ಕಚೇರಿಗೆ ಬರುವಂತೆ ತಿಳಿಸಿದರು. ಆ ಮೇರೆಗೆ ದಿಃ26.02.2019 ರಂದು ನಾನು ಮಂಗಳೂರಿನ ಕಂಕನಾಡಿಯಲ್ಲಿ ಇರುವ ಆರೋಪಿತರ ಕಚೇರಿಗೆ ಹೋದೆ. ಆ ದಿನ ಆರೋಪಿತರು ನೀವು ಸಂದರ್ಶನದಲ್ಲಿ ಉತೀರ್ಣರಾಗಿದೀರಾ ಮತ್ತು ಉದ್ಯೋಗ ಪಡೆಯಲು ಅಹರ್ರಾಗಿದ್ದು ಹೊಸದಾಗಿ ಡ್ರೆವಿಂಗ್ ಲೆಸೆನ್ಸ್ ಮಾಡಿಸಬೇಕಾಗಿದೆ ಮತ್ತು ಉದ್ಯೋಗ ಪಡೆಯಲು 8 ಲಕ್ಷ ರೂ ಹಣ ಕೊಡಬೇಕು ಎಂದು ತಿಳಿಸಿದರು. ಆ ಮೇರೆಗೆ ನಾನು ಅದೇ ದಿನ 1 ಲಕ್ಷ ಹಣವನ್ನು ನನ್ನ ಮೊಬೈಲ್ ಸಂಖ್ಯೆ ಃ9663912385 ಸಹಾಯದಿಂದ ಕೆನರಾ ಬ್ಯಾಂಕ್ ಖಾತೆಯಿಂದ 1ನೇ ಆರೋಪಿಯ ಖಾತೆಗೆ ಗೂಗಲ್ ಪೇ

ಮಾಡಿದೆ. ಆರೋಪಿತರು ಉಳಿದ ಹಣವನ್ನು ಹಂತ ಹಂತವಾಗಿ ಕೊಡುವಂತೆ ತಿಳಿಸಿದರು. ದಿಃ28.02.2019 ರಂದು 1,25,000/- ರೂಗಳನ್ನು ನನ್ನ ಕೆನರಾ ಬ್ಯಾಂಕ್ ಖಾತೆಯಿಂದ 1ನೇ ಆರೋಪಿಯ ಖಾತೆಗೆ ಆರ್.ಟಿ.ಜಿ.ಎಸ್ ಮುಖಾಂತರ ಪಾವತಿ ಮಾಡಿದೆ ಹಾಗೂ 25 ಸಾವಿರ ಮತ್ತು 50 ಸಾವಿರ ರೂಗಳನ್ನು ಸದರಿಯವರ ಖಾತೆಗೆ ಗೂಗಲ್ ಪೇ ಮುಖಾಂತರ ಕಳುಹಿಸಿದೆ. ದಿಃ11.03.2019 ರಂದು ಆರೋಪಿತರು ನನ್ನನ್ನು ಪುನಃ ಬೆಂಗಳೂರಿನ ಗಾಂಧಿ ನಗರದಲ್ಲಿ ಇರುವ ಯು.ಟಿ.ಎಲಿಜೆನ್ಸ್ ಹೊಟೇಲಿಗೆ ಕರೆಸಿಕೊಂಡರು. ಆಗ ಅಲ್ಲಿ ಆರೋಪಿತರು ನಿಮ್ಮ ಚಾಲನಾ ಪರವಾನಿಗೆ ಪತ್ರ ಬಂದಿದೆ ಮುಂದುವರೆದ ಹಣವನ್ನು ಪಾವತಿ ಮಾಡಬೇಕಾಗಿದೆ ಎಂದು ಕೇಳಿದರು. ಅದೇ ದಿನ ನಾನು ಮಡಿಕೇರಿಗೆ ವಾಪಸ್ಸು ಆಗಿ ನನ್ನ ಕೆನರಾ ಬ್ಯಾಂಕಿನಲ್ಲಿ ಇರುವ ಖಾತೆಯಿಂದ 1ನೇ ಆರೋಪಿಯ ಖಾತೆಗೆ 3 ಲಕ್ಷ ಹಣವನ್ನು ಆರ್.ಟಿ.ಜಿ.ಎಸ್ ಮುಖಾಂತರ ಕಳುಹಿಸಿದೆ ಮತ್ತು 1 ಲಕ್ಷ ಹಣವನ್ನು ಕೆನರಾ ಬ್ಯಾಂಕ್ ಖಾತೆಯಿಂದ ನನ್ನ ಮೊಬೈಲ್ ಸಹಾಯದಿಂದ ಗೂಗಲ್ ಪೇ ಮಾಡಿದೆ. ದಿಃ11.04.2019 ರಂದು ನನ್ನ ಎಕ್ಸಿಸ್ ಬ್ಯಾಂಕ್ ಖಾತೆಯಿಂದ ಗೂಗಲ್ ಪೇ ಮುಖಾಂತರ 1ನೇ ಆರೋಪಿ ಖಾತೆಗೆ 99 ಸಾವಿರ ರೂ ಕಳುಹಿಸಿದೆ. ಅದೇ ದಿನ ನನ್ನ ಕೆನರಾ ಬ್ಯಾಂಕ್ ಖಾತೆಯಿಂದ 1ನೇ ಆರೋಪಿಯ ಖಾತೆಗೆ ಗೂಗಲ್ ಪೇ ಮುಖಾಂತರ ಪಾವತಿ ಮಾಡಿದೆ ಮತ್ತು ಅದೇ ದಿನ ನನ್ನ ಎಕ್ಸಿಸ್ ಬಾಂಕ್ ಖಾತೆಯಿಂದ 1ನೇ ಆರೋಪಿಯ ಖಾತೆಗೆ 40 ಸಾವಿರ ರೂ ಹಣ ಗೂಗಲ್ ಪೇ ಮುಖಾಂತರ ಪಾವತಿ

ಮಾಡಿದೆ. ಆರೋಪಿತರು ಉದ್ಯೋಗ ಅವಕಾಶಕ್ಕಾಗಿ 8 ಲಕ್ಷ ಹಣ ಕೊಡುವಂತೆ ಕೇಳಿದ್ದರು ನೀನು ತಡವಾಗಿ ಹಣ ಕೊಟ್ಟಿದ್ದರಿಂದ ಹೆಚ್ಚುವರಿಯಾಗಿ 49 ಸಾವಿರ ಹಣ ಕೊಡಬೇಕೆಂದು ನನ್ನಿಂದ 49 ಸಾವಿರ ಹಣವನ್ನು ಪಡೆದಿರುತ್ತಾರೆ. ನಾನು ಹಣ ಪಾವತಿ ಮಾಡಿದ್ದರು ಆರೋಪಿತರು ಉದ್ಯೋಗವನ್ನು ಕೊಡಿಸದೇ 2 ತಿಂಗಳ ಕಾಲ ವಿಳಂಬ ಮಾಡಿದರು. ನಾನು ಉದ್ಯೋಗ ಕೊಡಿಸಿ ಎಂದು ಕೇಳಿದಾಗ ಆರೋಪಿತರು ಕಂಪನಿಯಿಂದ ಸಂದರ್ಶನಕ್ಕೆ ಒಳಪಡಿಸುವ ಅಧಿಕಾರಿ ರಜೆದಲ್ಲಿ ಇದ್ದಾರೆ ಇನ್ನೂ ಸ್ವಲ್ಪ ದಿನ ಕಾಯಬೇಕು ಎಂದು ತಿಳಿಸಿದರು. ನಾನು ಹಣ ವಾಪಸ್ಸು ಕೊಟ್ಟುಬಿಡಿ ಎಂದು ಕೇಳಿದೆ. ಆಗ ಆರೋಪಿತರು ಮತ್ತೊಂದು ತಿಂಗಳು ಕಾಯುವಂತೆ ಹೇಳಿದರು ಮತ್ತು ಆರೋಪಿತರು ನಮ್ಮ ಮುಖಾಂತರ ನೀವು ಬಂದಿರುವುದರಿಂದ ನಿಮಗೆ ಯಾವುದೇ ಮೋಸ ಆಗುವುದಿಲ್ಲ ಖಚಿತವಾಗಿ ಉದ್ಯೋಗ ಮಾಡಿಸಿಕೊಡುತ್ತೇವೆ ಎಂದು ಹೇಳಿದರು. ನಾನು ಜುಲೈ ನಲ್ಲಿ ಫೋನ್ ಮಾಡಿ ಉದ್ಯೋಗ ಇನ್ನೂ ಕೊಡಿಸಿಲ್ಲ ಹಾಗಾಗಿ ನನ್ನ ಹಣ ವಾಪಸ್ಸು ಕೊಡಿ ಎಂದು ಕೇಳಿದೆ. ಆ ಮೇರೆಗೆ 1ನೇ ಆರೋಪಿ ನನ್ನ ಕೆನರಾ ಬ್ಯಾಂಕ್ ಖಾತೆಗೆ 30 ಸಾವಿರ ರೂಗಳನ್ನು ಗೂಗಲ್ ಪೇ ಮುಖಾಂತರ ಕಳುಹಿಸಿದರು. ಅದೇ ವರ್ಷ ಡಿಸೆಂಬರ್ ತಿಂಗಳಲ್ಲಿ ತಲಾ 50 ಸಾವಿರದಂತೆ ಮೂರು ಭಾರಿ ನನ್ನ ಕೆನರಾ ಬಾಂಕ್ ಖಾತೆಗೆ 1ನೇ ಆರೋಪಿ ಗೂಗಲ್ ಪೇ ಮಾಡಿದರು. ದಿಃ01.01.2020 ರಂದು 50 ಸಾವಿರ ಮತ್ತು 70 ಸಾವಿರ ಹಣವನ್ನು 1ನೇ ಆರೋಪಿ ಗೂಗಲ್ ಮುಖಾಂತರ ಹಣ ಪಾವತಿ ಮಾಡಿದರು. ಹೀಗೆ ಒಟ್ಟು

4,05,000/- ಹಣವನ್ನು 1ನೇ ಆರೋಪಿ ನನ್ನ ಖಾತೆಗೆ ಹಣ ವಾಪಸ್ಸು ಹಾಕಿರುತ್ತಾರೆ. ಆದಾದ ನಂತರ ಆರೋಪಿತರು ತಮ್ಮ ಮೊಬೈಲ್ ನ್ನು ಸ್ವಿಚ್ ಆಫ್ ಮಾಡಿದರು. ಆರೋಪಿತರು ನನಗೆ ಭಾಕಿ 4,44,000/- ರೂಗಳನ್ನು ಕೊಡಬೇಕಾಗಿದೆ. ನನಗೆ ಆರೋಪಿತರು ಸದರಿ ಹಣವನ್ನು ಕೊಡಲಿಲ್ಲ ಮತ್ತು ಉದ್ಯೋಗ ಕೊಡಿಸದೇ ಮೋಸ ಮಾಡಿದ್ದಾರೆ. ನಾನು ದಿಃ19.12.2021 ಕ್ಕೆ ಪೊಲೀಸರಿಗೆ ದೂರು ಕೊಟ್ಟೆ ಆದರೆ ಪೊಲೀಸರು ಕೊರೊನಾ ಇದಿದ್ದರಿಂದ ಮತ್ತು ಆರೋಪಿತರು ಫೋನ್ ಕರೆಗೆ ಸಿಗದೆ ಇದ್ದಿದರಿಂದ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಆ ಮೇರೆಗೆ ನಾನು ದಿಃ17.03.2022 ರಂದು ಮಾನ್ಯ ನ್ಯಾಯಾಲಯಕ್ಕೆ ಖಾಸಗಿ ದೂರನ್ನು ದಾಖಲು ಮಾಡಿದೆ. ಸಾಕ್ಷಿಗೆ ಖಾಸಗಿ ಪಿರ್ಯಾದಿಯನ್ನು ತೋರಿಸಲಾಗಿ ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ.1 ಎಂದು ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ನಾನು ಸಲ್ಲಿಸಿದ್ದ ಖಾಸರಿ ಪಿರ್ಯಾದಿ ಪೆಲೀಸರಿಗೆ ತನಿಖೆಗೆ ಕಳುಹಿಸಿಲಾಗಿತ್ತು. ತನಿಖಾ ಕಾಲಕ್ಕೆ ದಿಃ12.01.2023 ರಂದು ಪೊಲೀಸರು ನನ್ನನ್ನು ಮಂಗಳೂರಿನ ಕಂಕನಾಡಿಯಲ್ಲಿ ಇರುವ ಬಿ.ಎಸ್.ಸಿ ಸೆಲ್ಯೂಷನ್ ಸಂಸ್ಥೆಯನ್ನು ತೋರಿಸುವಂತೆ ಕೇಳಿದರು. ನಾನು ಸ್ಥಳದಲ್ಲಿ ಹಾಜರಾಗಿ ಸದರಿ ಸಂಸ್ಥೆಯನ್ನು ತೋರಿಸಿದೆ. ಆ ಮೇರೆಗೆ ಪೋಲೀಸರು ಚಾಸಾ 2 ಮತ್ತು 3 ರವರವನ್ನು ಬರಮಾಡಿಕೊಂಡು 11.00 ಗಂಟೆಯಿಂದ 11.45 ಗಂಟೆಯವರಗೆ ಮಹಜರ್ ಬರೆದರು. ಮಹಜರ್ ಕಾಲಕ್ಕೆ ಸದರಿ

ಸಂಸ್ಥೆಯ ಫೋಟೊ ತೆಗೆದರು ಸದರಿ ಕಚೇರಿ ಆಗ ಬೀಗ ಹಾಕಿತ್ತು. ಮಹಜರ್ ಗೆ ನಾನು , ಚಾಸಾ 2, 3 ಮತ್ತು ಪೊಲೀಲಸರು ಸಹಿ ಮಾಡಿದ್ದೇವೆ. ಸಾಕ್ಷಿಗೆ ಮಹಜರ್ ತೋರಿಸಲಾಗಿ ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ.2 ಎಂದು ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಮಹಜರ್ ಕಾಲಕ್ಕೆ ತೆಗೆದ ಎರಡು ಫೋಟೊಗಳನ್ನು ನೋಡಿ ಗುರುತಿಸಿದೇನೆ. ಅವುಗಳನ್ನು ನಿಪಿ.3 ಮತ್ತು 4 ಎಂದು ಗುರುತಿಸಕಾಯಿತು. ನಿಪಿ.3 ಮತ್ತು 4 ರಲ್ಲಿ ಆರೋಪಿತರ ಸಂಸ್ಥೆ ಮುಚ್ಚಿರುವುದು ಕಂಡು ಬರುತ್ತದೆ ಮತ್ತು ಅವುಗಳಲ್ಲಿ ನಾನು, ಚಾಸಾ 2 , 3 ಹಾಗೂ ಪೊಲೀಸರು ಇದ್ದೇವೆ. ದಿಃ13.01.2023 ರಂದು ಬೆಂಗಳೂರಿನ ಗಾಂಧಿ ನಗರದಲ್ಲಿ ಇರುವ ಯು.ಟಿ.ಎಲಿಜೆನ್ಸ್ ಹೋಟೆಲಿಗೆ ಕರೆದುಕೊಂಡು ಹೋಗಿ ಅಲ್ಲಿ ಮಹಜರ್ ಕ್ರಮ ಜರುಗಿಸಿದರು. ಸದರಿ ಮಹಜರ್ ಕಾಲಕ್ಕೆ ಚಾಸಾ 2 ಮತ್ತು 5 ರವರು ಇದ್ದರು. ಸದರಿ ಮಹಜರ್ ನ್ನು 12.30 ರಿಂದ 1.15 ರವೆಗೆ ಬೆರಯಲಾಯಿತು. ಮಹಜರ್ ಕಾಲಕ್ಕೆ ಫೋಟೊ ತೆಗೆಯಲಾಗಿದೆ. ಸದರಿ ಮಹಜರ್ ಗೆ ನಾನು, ಚಾಸಾ 2 5 ಮತ್ತು ಪೊಲೀಸರು ಸಹಿ ಮಾಡಿದ್ದೇವೆ. ಸಾಕ್ಷಿಗೆ ಮಹಜರ್ ತೋರಿಸಲಾಗಿ ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ.5 ಎಂದು ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು. ಮಹಜರ್ ಕಾಲಕ್ಕೆ ತೆಗೆದ ಎರಡು ಫೋಟೊಗಳನ್ನು ನೋಡಿ ಗುರುತಿಸಿದೇನೆ. ಅವುಗಳನ್ನು ನಿಪಿ.6 ಮತ್ತು 7 ಎಂದು

ಗುರುತಿಸಲಾಯಿತು. ನಿಪಿ.6 ಮತ್ತು 7 ರಲ್ಲಿ ಇರುವ ಜಾಗ ಯು.ಟಿ.ಎಲಿಜೆನ್ಸ್ ಹೊಟೇಲಿನ ಒಳಭಾಗ ಆಗಿದ್ದು ಅದಲ್ಲಿ ನಾನು, ಚಾಸಾ 2, 5 ಮತ್ತು ಪೊಲೀಸರು ಇದ್ದೇವೆ. ದಿಃ18.01.2023 ರಂದು ನನ್ನ ಬ್ಯಾಂಕ್ ಖಾತೆಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರು ಮಾಡುವಂತೆ ಹೇಳಿದರು. ಆ ಮೇರೆಗೆ ನಾನು ಕೆನರಾ ಬ್ಯಾಂಕ್ ಖಾತೆಯ ಪಾಸ್ ಬುಕ್ ಮೊದಲನೇ ಪುಟದ ನಕಲನ್ನು ಮತ್ತು ಕೆನರಾ ಬ್ಯಾಂಕ್ ಹಾಗೂ ಎಕ್ಸಿಸ್ ಬ್ಯಾಂಕ್ ಖಾತೆಯ ಲೆಕ್ಕ ತಖ್ತೆ ನಕಲನ್ನು ಪೊಲೀಸರ ಮುಂದೆ ಠಾಣೆಯಲ್ಲಿ ಹಾಜರು ಮಾಡಿದೆ. ಆಗ ಚಾಸಾ 4 ಮತ್ತು 5 ರವರನ್ನು ಪೊಲೀಸರು ಬರಮಾಡಿಕೊಂಡು ಬೆಳಿಗ್ಗೆ 11.00 ಗಂಟೆಯಿಂದ 11.30 ಗಂಟೆಯವರೆಗ ಮಹಜರ್ ಬರೆದು ಅವುಗಳನ್ನು ಅಮಾನತು ಪಡಿಸಿಕೊಂಡರು. ಸದರಿ ಮಹಜರ್ ಗೆ ನಾನು ಚಾಸಾ 4 , 5 ಮತ್ತು ಪೊಲೀಸರು ಸಹಿ ಮಾಡಿದ್ದೇವೆ. ಸಾಕ್ಷಿಗೆ ಮಹಜರ್ ತೋರಿಸಲಾಗಿ ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ.8 ಎಂದು ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ.8(ಎ) ಎಂದು ಗುರುತಿಸಲಾಯಿತು. ದಿಃ07.03.2023 ರಂದು ಪೊಲೀಸರು ಮಡಿಕೇರಿ ಶಾಖೆಯ ಕೆನರಾ ಬ್ಯಾಂಕಿಗೆ ಕರೆಸಿದ್ದರು. ನಾನು ಸದರಿ ಬ್ಯಾಂಕಿಗೆ ಹಾಜರಾಗಿ ಆರ್ ಟಿ.ಜಿ.ಎಸ್ ಮುಖಾಂತರ ಹಣ ವರ್ಗಾಯಿಸಿದ ಬಗ್ಗೆ ಮಾಹಿತಿ ಕೊಟ್ಟೆ ಆ ಕಾಲಕ್ಕೆ ಪೊಲೀಸರು ಮಹಜರ್ ಬರೆದರು. ಮಹಜರ್ ಕಾಲಕ್ಕೆ ಚಾಸಾ 3 ಮತ್ತು 4 ರವರಾು ಹಜಾರಿದ್ದರು. ಸದರಿ ಮಹಜರ್ ನ್ನು ಬೆಳಿಗ್ಗೆ 10.00 ಗಂಟೆಯಿಂದ 10.45

ಗಂಟೆಯವರಗೆ ಬರೆಯಲಾಯಿತು. ಆ ಕಾಲಕ್ಕೆ ಪೊಲೀಸರು ಫೋಟೊ ತೆಗೆದರು. ಸದರಿ ಮಹಜರ್ ಗೆ ನಾನು, 3 , 4 ಮತ್ತು ಪೊಲೀಸರು ಸಹಿ ಮಾಡಿದ್ದೇವೆ. ಸಾಕ್ಷಿಗೆ ಮಹಜರ್ ತೋರಿಸಲಾಗಿ ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ.9 ಎಂದು ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಫೋಟೊ ತೊರಿಸಲಾಗಿ ಅದನ್ನು ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ.10 ಎಂದು ಗುರುತಿಸಲಾಯಿತು. ನಿಪಿ.10 ರಲ್ಲಿ ನಾನು, ಚಾಸಾ 3 , 4 ಮತ್ತು ಪೊಲೀಸರು ಇದುದ ಅದು ಕೆನರಾ ಬ್ಯಾಂಕ್ ನ ಒಳಭಾಗ ಆಗಿರುತ್ತದೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ಆರೋಪಿತರು ನ್ಯಾಯಾಲಯದ ಮುಂದೆ ಗೈರು ಹಾಜರಿದ್ದು ಸಾಕ್ಷಿ ಆರೋಪಿತರನ್ನು ಗುರುತಿಸಲು ತಕರಾರು ಇಲ್ಲ ಎಂದು ಆರೋಪಿತರ ಪರ ವಕೀಲರು ಅರ್ಜಿ ಸಲ್ಲಿಸಿದ್ದಾರೆ.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಸಿ ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.